ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ:ಆಯವ್ಯಯ:ಜಿ.ಸಿ.ಸಿ/11/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು ದಿನಾಂಕ 11.05.2022.

## ಸುತ್ತೋಲೆ

ವಿಷಯ: ಇಲಾಖಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ /ಮರಣ ಹೊಂದಿರುವ ನೂತನ ಪಿಂಚಣಿಯೋಜನೆಗೆ ಒಳಪಡುವ ಸಿಬ್ಬಂದಿಗಳ ವಿವರಗಳನ್ನು ಸಲ್ಲಿಸುವ ಬಗ್ಗೆ.

*****

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ /ಮರಣ ಹೊಂದಿರುವ ನೂತನ ಪಿಂಚಣಿಯೋಜನೆಗೆ ಒಳಪಡುವ ಬೋಧಕರು/ತತ್ಸಮಾನ ವೃಂದದವರು ಮತ್ತು ಬೋಧಕೇತರರ ಸಿಬ್ಬಂದಿಗಳಲ್ಲಿ ಕೆಲವು ಸಿಬ್ಬಂದಿಗಳ ಪಿಂಚಣಿ ಇತ್ಯರ್ಥವಾಗದೇ ನಿವೃತ್ತ ಸಿಬ್ಬಂದಿಗಳಿಂದ ಹಾಗೂ ಮೃತ ನೌಕರರ ಅವಲಂಬಿತರಿಂದ ಪಿಂಚಣಿ ಇತ್ಯರ್ಥಪಡಿಸಲು ಮನವಿಗಳು ಸ್ವೀಕೃತವಾಗುತ್ತಿರುವುದನ್ನು ಗಮನಿಸಲಾಗಿದೆ.

ಪ್ರಯುಕ್ತ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ /ಮರಣ ಹೊಂದಿರುವ ನೂತನ ಪಿಂಚಣಿಯೋಜನೆಗೆ ಒಳಪಡುವ ನೌಕರರ ಪಿಂಚಣಿ ಪ್ರಕರಣಗಳನ್ನು ತುರ್ತಾಗಿ ಇತ್ಯರ್ಥಪಡಿಸಬೇಕಾಗಿದ್ದು ಅಗತ್ಯ ಮಾಹಿತಿಯನ್ನು ಈ ಪತ್ರಕ್ಕೆ ಲಗತ್ತಿಸಿರುವ ಅನುಬಂಧ-1 ಮತ್ತು 2ರಲ್ಲಿ ನಮೂದಿಸಿ ದೃಢೀಕರಿಸಿ ದಿನಾಂಕ:18.05.2022ರ ಒಳಗಾಗಿ ಈ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಲಾಗಿದೆ. ಸಾಫ್ಟ್ ಕಾಪಿಯನ್ನು ಇ ಮೇಲ್ ವಿಳಾಸ : dcebudgetindent@gmail.com ಕ್ಕೆ ನಿಗದಿತ ಕೊನೆಯ ದಿನಾಂಕದ ಒಳಗಾಗಿ ಸಲ್ಲಿಸುವುದು, ತಪ್ಪಿದ್ದಲ್ಲಿ ನಿವೃತ್ತ ಸಿಬ್ಬಂದಿಗಳಿಂದ ಹಾಗೂ ಮೃತ ನೌಕರರ ಅವಲಂಬಿತರಿಂದ ದೂರು ಸಲ್ಲಿಕೆಯಾದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರು ಹಾಗೂ ಕಛೇರಿ ಸಿಬ್ಬಂದಿಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

ಈಗಾಗಲೇ ವಿವಿಧ ಬಾಕಿಗಳ ಪಾವತಿಗೆ ಬಿಲ್ ಖಜಾನೆಗೆ/ಉಪಖಜಾನೆಗಳಿಗೆ ಸಲ್ಲಿಕೆಯಾಗಿ ವಿವಿಧಕಾರಣಗಳಿಂದ ತಿರಸ್ಕೃತವಾಗಿದ್ದಲ್ಲಿ ಸದರಿ ಬಿಲ್ ಪ್ರತಿ ಮತ್ತು ಆಕ್ಷೇಪಣಾ ಹಿಂಬರಹದ ವಿವರಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.

ಕಾಲೇಜು ಶಿಕ್ಷಣ ನಿರ್ದೇಶಕರು,

**ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು.**

1.2016ರ ಪರಿಷ್ಕೃತ ಯುಜಿಸಿ ಹಿಂಬಾಕಿಗೆ ಸಂಬಂದಿಸಿದಂತೆ ಅನುಬಂಧ-2A.
2. ಮಹಾಲೇಖಪಾಲರ ವೇತನ ಪತ್ರ.(AG SLIP).
3.ಉನ್ನತ AGPಗೆ ಸಂಬಂಧಿಸಿದಂತೆ ಇಲಾಖಾ ಆದೇಶಗಳು.
4ವಿವಿಧ ಬಾಕಿಗಳಿಗೆ ಸಂಬಂಧಿಸಿದಂತೆ, DUE, DRAWN ,DIFFERENCE STATEMENT.
5.ಮೃತರಾಗಿದ್ದಲ್ಲಿ ಮರಣ ಪ್ರಮಾಣ ಪತ್ರ .
6.ನಿವೃತ್ತರಾದಲ್ಲಿ ಸೇವಾ ಬಿಡುಗಡೆ ಆದೇಶ ಪ್ರತಿ.
7.ಕಾಲೇಜಿನ ಪ್ರಾಂಶುಪಾಲರ ಖಾತೆಯ K-2 RECIPIENT ID & MANDATE FORM
8.HRMS BEFORE APPROVAL DRAFT ARREARS REPORT.
9.ಈ ಪತ್ರಕ್ಕೆ ಲಗತ್ತಿಸಿರುವ ಅನುಬಂಧ 1 ಮತ್ತು 2ರ ದೃಢೀಕೃತ ಪ್ರತಿ.

ಇವರಿಗೆ:

1) ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು-ಅಗತ್ಯ ಕ್ರಮಕ್ಕಾಗಿ
2) ಮಾಹಿತಿ & ತಂತ್ರಜ್ಞಾನ ಅಧಿಕಾರಿಗಳು , ಮಾಹಿತಿ & ತಂತ್ರಜ್ಞಾನ ವಿಭಾಗ , ಕಾಶಿಇ, ಕೇಂದ್ರಕಛೇರಿ ಬೆಂಗಳೂರು- ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು
3) ಕಛೇರಿ ಪ್ರತಿ.